**ಕರ್ನಾಟಕ ಸರ್ಕಾರ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ:-ಸಿ3(7)ಪ್ರಾ.ಶಿ.ವರ್ಗ 01/2015-16 ದಿ: 26-08-2015

**ಜ್ಞಾಪನ**

ವಿಷಯ: 2015-16 ನೇ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ ಕೋರಿಕೆ ಮೇರೆಗೆ ಕೌನ್ಸೆಲಿಂಗ್ ಮೂಲಕ ಅಂತರ್‌ಘಟಕ ವರ್ಗಾವಣೆ ಬಗ್ಗೆ .

******

**ಪ್ರಾಥಮಿಕ ಶಾಲಾ ಸಹಶಿಕ್ಷಕರ ಅಂತರ ಘಟಕ -ವರ್ಗಾವಣೆ ಕೌನ್ಸೆಲಿಂಗ್ ವೇಳಾಪಟ್ಟಿ**

| ಕ್ರ ಸಂ | ದಿನಾಂಕ | ಅಂತಿಮ ಆದ್ಯತಾ ಪಟ್ಟಿಯಲ್ಲಿರುವ ಕ್ರಮಸಂಖ್ಯೆಗಳಂತೆ |
|---|---|---|
| 1 | 28-08-2015 | 1 ರಿಂದ 150 ರವರೆಗಿನ ಪ್ರಾಥಮಿಕ ಶಾಲಾ ಸಹಶಿಕ್ಷಕರು ( ನಾಲ್ಕು ವಿಭಾಗಗಳು ಸೇರಿ) |

**ಕೌನ್ಸೆಲಿಂಗ್ ನಡೆಯುವ ಸ್ಥಳ:**

1. **ಬೆಂಗಳೂರು ವಿಭಾಗ – ಶಿಕ್ಷಕರ ಸದನ, ಕೆಂಪೇಗೌಡ ರಸ್ತೆ, ಬೆಂಗಳೂರು -02**
2. **ಮೈಸೂರು ವಿಭಾಗ – ಸಹನಿರ್ದೇಶಕರ ಕಛೇರಿ , ಸಾ.ಶಿ.ಇಲಾಖೆ, ರಾಮಸ್ವಾಮಿ ಸರ್ಕಲ್, ಮೈಸೂರು**
3. **ಕಲಬುರಗಿ ವಿಭಾಗ – ಅಪರ ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ ಕಲಬುರಗಿ**
4. **ಬೆಳಗಾವಿ ವಿಭಾಗ – ಅಪರ ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಡಯಟ್ ಸಭಾಂಗಣ, ಧಾರವಾಡ**

**ಕೌನ್ಸೆಲಿಂಗ್‌ನಲ್ಲಿ ಹಾಜರಾಗುವ ಶಿಕ್ಷಕರುಗಳು ಬಿ.ಇ.ಓ ಇವರಿಂದ ಅನುಮೋದಿತ ಪ್ರತಿ ಪ್ರಕರಣಕ್ಕೆ ಸಂಬಂಧಿಸಿದ ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುವುದು.**

1. ತೀವ್ರತರ ಖಾಯಿಲೆ ಪ್ರಕರಣ- ವೈದ್ಯಕೀಯ ಮಂಡಳಿಯಿಂದ ನೀಡಿರುವ ಪ್ರಮಾಣ ಪತ್ರದೊಂದಿಗೆ ಹಿಂದಿನ ವೈದ್ಯಕೀಯ ತಪಾಸಣೆ ಪಡೆದಿರುವ ದಾಖಲೆಗಳು
2. ವರ್ಗಾವಣೆಯ ಅರ್ಜಿ ಬಿ.ಇ.ಓ ಅನುಮೋದಿತ ಪ್ರತಿ ಮತ್ತು ಸೇವಾ ದೃಢೀಕರಣ ಪತ್ರ
3. ವೈದ್ಯಕೀಯ ತಪಾಸಣೆ ಪಡೆದಿರುವ ದಾಖಲೆಗಳು
4. ವೈದ್ಯಕೀಯ ಚಿಕಿತ್ಸೆ ಪಡೆದ ಬಗ್ಗೆ ದಾಖಲೆಗಳು
5. ಗುರುತಿನ ಪತ್ರ , ಮತದಾರರ ಚೀಟಿ, ಆಧಾರ್ ಕಾರ್ಡ್
6. ಕೆ.ಜಿ.ಐ.ಡಿ ಪಾಲಿಸಿ ಪ್ರತಿ
7. ವರ್ಗಾವಣೆ ಅಧಿನಿಯಮ ಜಾರಿಗೆ ಬಂದನಂತರ ಇದೇ ಮೊದಲನೇ ಬಾರಿಗೆ ಘಟಕದ ಹೊರಗೆ ವರ್ಗಾವಣೆ ಪಡೆಯುತ್ತಿದ್ದೇನೆ ಎಂಬ ಬಗ್ಗೆ ಮುಚ್ಚಳಿಕೆ ಪತ್ರ

(ಕೆ. ಆನಂದ )
**ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)**
ಹಾಗೂ ರಾಜ್ಯ ಮಟ್ಟದ ವರ್ಗಾವಣಾ ಪ್ರಾಧಿಕಾರಿಗಳು,
ಬೆಂಗಳೂರು ವಿಭಾಗ